

ಹಿಡಿದುಕೊಳ್ಳಬೇಕಾ, ಈ ಪ್ರಶ್ನೆ ಅಪ್ರಸ್ತುತ. ಅದನ್ನು ಅವಳಿಗೆ ಇಷ್ಟವಾದವರೊಬ್ಬರು ಕೊಟ್ಟಿರಬಹುದು. ಮತ್ತು ಅವರೀಗ ಇಲ್ಲದೇ ಇರಬಹುದು. ನೆನಪಿಗೆ ಹಿಡಿದಿಟ್ಟುಕೊಂಡಿರಬಹುದು. ಅವಳು ಅಲ್ಲಿಗೆ ಬಂದಾಗ ಮಳೆಯಿದ್ದು, ಅದು ನಿಂತು ಬಿಸಿಲ ರಣರಣವಾಗಿ ಅದು ಕರಗಿರಬಹುದು. ಆದರೆ ಅವಳು ತನ್ನ ಕೈಯಾರೆ ಹಿಡಿದುಕೊಂಡಿದ್ದ ಅದು ಈಗ ಇಲ್ಲ, ಆಕಾಶದಲ್ಲಿ ಹಾರಿಹೋಗುತ್ತಿದೆ. ಮತ್ತು ಹಾರಿಹೋಯಿತು ಕೂಡ. ಸ್ವಲ್ಪ ದೂರ ಹೋಗಿ ನೋಡಿದರೆ ಅವಳ ಅರ್ಧ ಬಲಭಾಗ ಕಾಣುತ್ತದೆ. ನಿಮ್ಮ ಕಲ್ಪನೆಯಂತೆ ರೂಪ. ಅವಳ ಕಣ್ಣುಗಳಲ್ಲಿ ದುಃಖ ಮಡುಗಟ್ಟಿದೆ. ಕೆನ್ನೆಗಳು ಬಾಡಿವೆ. ಈಚೆ ಬಂದು ಸ್ವಲ್ಪ ಆಚೆ ಸರಿದು ನೋಡಿದರೆ ಈಗ ಅವಳ ಎಡಭಾಗ. ಅವಳ ಕಣ್ಣುಗಳಲ್ಲಿ ಹೊಳಪು. ಕೆನ್ನೆಗಳು ನೋಡಿದವರ ಎದೆಗಳಲ್ಲಿ ಬೆಂಕಿಯನ್ನು ಹೊತ್ತಿಸುತ್ತವೆ. ಎದುರಿನಿಂದ ನೋಡುವುದಕ್ಕೆ ಆಗುವುದಿಲ್ಲ. ಕಂದಕ. ಪ್ರಪಾತ. ಅದರಾಚೆ ಬಯಲು. ಅದು ಅಂತಿಂತಹ ಬಯಲಲ್ಲ. ಬಯಲೋ ಬಯಲು. ಮತ್ತು ಖಾಲಿ ಎಲ್ಲಿ ನೋಡಿದರೆ ಅಲ್ಲಿ. ಅವಳು ಈಗ ಅಳುತ್ತಿದ್ದಾಳೆ. ಅವಳು ಅಳುತ್ತಿರುವುದನ್ನು ಕಾಣುವಷ್ಟರಲ್ಲಿ ರಾತ್ರಿ ತನ್ನ ಕತ್ತಲ ಪರದೆಗಳನ್ನು ಇಳಿಬಿಡುತ್ತಿದೆ. ಅವಳು ಅಲ್ಲಿಯೇ ಕುಳಿತಿರುವಳು. ಅಲ್ಲಿಯೇ. ನೋಡಿ ನೋಡಿ ಸಾಕಾಗಿ ಹತ್ತಿರಕ್ಕೆ ಹೋಗಬೇಕು ಅನ್ನಿಸುತ್ತದೆ. ಹೋದಾಗ ಅವಳು ಅಲ್ಲಿ ಇಲ್ಲ. ಕತ್ತಲು ಘನಗೊಂಡಿದೆ ಬಯಲಲ್ಲಿ. ನೀವು ಜಹಜು ಮಂಜುಗಡ್ಡೆಯನ್ನು ಸೀಳಿಕೊಂಡು ಶರಧಿಯಲ್ಲಿ ಹೋಗುವಂತೆ ಕತ್ತಲನ್ನು ಸೀಳಿಕೊಂಡು ಹೋದಾಗ ಅವಳು ಕುಳಿತ ಜಾಗದಲ್ಲಿ ಜಾಗವೇ ಇಲ್ಲ. ಆದರೆ ನಿಮಗೆ ಅರಿವಾಗುತ್ತಿದೆ ನಿಮ್ಮ ದೇಹ ನಿಮ್ಮ ಹೆಜ್ಜೆ ನಿಮ್ಮ ಕೈಗಳು ಎಲ್ಲವೂ. ಹೃದಯದ ಬಡಿತವೂ ಸಹ. ನೀವು ಇದ್ದೀರ ಅಲ್ಲಿ. ಅವಳು ಇಲ್ಲ ಅಲ್ಲಿ. ಸಹಜವಾಗಿಯೇ ಆಶ್ಚರ್ಯ. ನೀವು ಅಲ್ಲಿಯೇ ಇರುವಿರಿ ತಡಕಾಡುತ್ತ ಕತ್ತಲಲ್ಲಿ ಬೆರಳುಗಳಿಗೆ ಕಣ್ಣುಗಳ ಬರಿಸಿಕೊಂಡು. ಅವಳು ಒಣ ಮೀನಿನ ಮಾರುಕಟ್ಟೆಯಲ್ಲಿ ಅರ್ಧ ಕೆ.ಜಿ. ಒಣಮೀನನ್ನು ಕೊಂಡುಕೊಂಡು, ಪಕ್ಕದ ತರಕಾರಿ ಮಾರುಕಟ್ಟೆಯಲ್ಲಿ ಬದನೆಕಾಯಿ, ಹಸಿಮೆಣಸು, ಆಲುಗೆಡ್ಡೆ, ಟಮೋಟೊ, ಬೆಳ್ಳುಳ್ಳಿ, ಈರುಳ್ಳಿ ಮತ್ತು ದಿನಸಿ ಅಂಗಡಿಯಲ್ಲಿ ಉಪ್ಪು ಮತ್ತಿತರೆ ಕೊಂಡುಕೊಂಡು ಪೊಟ್ಟಣ ಕಟ್ಟಿಸಿಕೊಂಡು ಚೀಲದಲ್ಲಿ ಇಟ್ಟುಕೊಂಡು ಹೋದಳು.

ಅವಳ ಕಣ್ಣಿಂದ ಇಳಿದ ಕಣ್ಣೀರ ಜಾಡು ಬೇಸಿಗೆಯಲ್ಲಿ ರಪ್ಪಂಥ ಬಿದ್ದ ಮಳೆ ಸಡನ್ನಾಗಿ ನಿಂತಾಗ ಮಣ್ಣಹಾದಿಯಲ್ಲಿ ಮೂಡುವ ಗುರುತಿನಂತೆ ಇದೆ. ನೀವು ನೋಡಬಹುದಿತ್ತು. ಆದರೆ ನೀವು ಅಲ್ಲಿದ್ದೀರಿ. ಆಮೇಲೆ ಸಾವಿರಾರು ದಿನಗಳು ಕಳೆದಮೇಲೆ ಅಂದರೆ ನಾಕೈದು ವರ್ಷಗಳು ಕಳೆದ ಮೇಲೆ ಒಂದು ವಸಂತಕಾಲ. ಬಿಸಿಲು. ಅದನ್ನು ಲೆಕ್ಕಿಸದೆ ಕೋಗಿಲೆಗಳು ಸುಶ್ರಾವ್ಯವಾಗಿ ಹಾಡುತ್ತಿವೆ. ಜೊತೆಗೆ ಅಲ್ಲೊಂದು ಇಲ್ಲೊಂದು ದೂರದಿಂದ ಹಳೆಯ ಕಾಲದ ಮದುವೆಯೊಂದರಲ್ಲಿ ತೇಲಿಬರುವ ಸೋಬಾನೆ ಪದಗಳಂತೆ ಸಿಕಾಡಗಳ ಸದ್ದು. ಅವುಗಳ ಸದ್ದು ವಿಲಕ್ಷಣವಾಗಿ ಲಕ್ಷಣವಾಗಿದೆ. ಹಾಗೂ ಆ ಊರಿನಲ್ಲಿ ಬರೀ ಗಂಡಸರು ಮಾತ್ರ ಇರುವುದೇನೊ ಎನ್ನುವಂತೆ ಶಹರದ ಮುಖ್ಯ ರಸ್ತೆಯ ತುಂಬೆಲ್ಲ ಗಂಡಸರೋ ಗಂಡಸರು. ಎಲ್ಲಿ ನೋಡಿದರೆ ಅಲ್ಲಿ. ಮುತ್ತಿಕೊಂಡಿದ್ದಾರೆ. ಓಡಾಡುತ್ತಿದ್ದಾರೆ ಅತ್ತಿಂದಿತ್ತ, ಇತ್ತಿಂದತ್ತ. ಇವರ ಜೊತೆಗೆ ಅವೊತ್ತು ಅವಳನ್ನು ನೋಡುತ್ತಿದ್ದವರೂ ಇದ್ದಾರೆ. ಸಡನ್ನಾಗಿ ಅಸ್ವಾಭಾವಿಕವಾಗಿ ಮಟಮಟ ಮಧ್ಯಾಹ್ನದಲ್ಲಿ ಅವಳು ಅದೇ ವಸ್ತ್ರದಲ್ಲಿ, ಅದೇ ಛತ್ರಿಯನ್ನು ಹಿಡಿದು ರಸ್ತೆಯಲ್ಲಿ ಬಂದಳು. ಅಷ್ಟೊಂದು ಜನರಿರುವಾಗ ಯಾವ ದಿಕ್ಕಿನಿಂದ ಎಂದು ಹೇಳಲು ಆಗುವುದಿಲ್ಲ. ಬಂದಳು. ಅದೇ ಅವರು, ಇವಳನ್ನು ಕಂಡು ಅವಳಾಗಿದ್ದಾಳಲ್ಲ ಎಂದುಕೊಂಡು ಅವಳ ಹತ್ತಿರಕ್ಕೆ ಧಾವಿಸಿದರು ಜನರನ್ನು ತಳ್ಳಿಕೊಂಡು. ಅವಳು ಅವೊತ್ತು ಹಿಡಿದಿದ್ದ ರೀತಿಯಲ್ಲಿಯೇ ಛತ್ರಿಯನ್ನು ಹಿಡಿದುಕೊಂಡಿದ್ದಾಳೆ. ಹಿಡಿದುಕೊಂಡು ಅದರ ಕೊಕ್ಕೆಯಂತಿರುವ ಹಿಡಿಗೆ ಒಂದು ಕೈಯನ್ನು ಹಾಕಿದ್ದಾಳೆ. ಈಗ ಛತ್ರಿ ಮತ್ತೆ ಅವೊತ್ತು ಹಾರಿದಂತೆ ಮೇಲಕ್ಕೆ ಹಾರತೊಡಗಿತು.

ಅವಳು ಗಂಡಸರ ನಡುವೆ ಮತ್ತು ಅವಳನ್ನು ಕತ್ತಲಲ್ಲಿ ಹುಡುಕುತ್ತಿದ್ದವರ ಮುಂದೆ ಒಂದೊಂದೇ ವಸ್ತ್ರಗಳ ಕಳಚಿದಳು. ಬೆತ್ತಲಾದಳು. ನೋಡುತ್ತಾರೆ ಅಲ್ಲಿ ಯೋನಿ ಇಲ್ಲ, ಕಣ್ಣುಗಳಿಲ್ಲ, ತುಟಿಗಳಿಲ್ಲ, ಕೈಗಳಿಲ್ಲ, ಕಾಲುಗಳಿಲ್ಲ, ದೇಹವೇ ಇಲ್ಲ. ಗಂಡಸರು ನೋಡುತ್ತಿದ್ದಾರೆ. ಛತ್ರಿಯಿಲ್ಲ ಆಕಾಶದಲ್ಲಿ. ಅವಳೇ ಇಲ್ಲ. ಇದೆಲ್ಲ ಅವರ ನೇತ್ರಗಳ ಮುಂದೆಯೇ ಘಟಿಸುತ್ತಿದೆ. ನೋಡುತ್ತಿದ್ದಾರೆ. ಅವಳಿಲ್ಲ.

ನಂತರ

ಗಂಡಸರು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಅವರ ಮನೆಗಳಲ್ಲಿ ಹೆಂಗಸರೇ ಇಲ್ಲ.

ಮನೆಗಳೂ ಸಹ ಮನೆಗಳಾಗಿರದೆ ಕನ್ನಡಿಗಳಾಗಿವೆ. ತಮ್ಮ ಬಿಂಬಗಳೇ ಸಹಸ್ರವಾಗಿವೆ. ಅವರು ಮುಂದೆ ಹೋದಂತೆ ಅಷ್ಟೇ ಗತಿಯಲ್ಲಿ ಅವರ ಬಿಂಬಗಳು ಎದುರಿಗೆ. ಹೊರ ಬರದೆ ಗೊಂದಲಗೊಂಡಿದ್ದಾರೆ. ತುದಿಯಿಲ್ಲ ಮೊದಲಿಲ್ಲ. ಎತ್ತನೋಡಿದರತ್ತ ಬಿಂಬಗಳ ಬಿಂಬಗಳು, ಪ್ರತಿರೂಪಗಳು. ತಮ್ಮ ಬಿಂಬಗಳ ತಾವೇ ಒಡೆದುಕೊಂಡರು. ಮತ್ತೆ ಎಲ್ಲ ಬಯಲಾಯಿತು. ಎಲ್ಲಿಯೂ ಹೆಂಗಸರ ಕುರುಹಿಲ್ಲ, ಗುರುತಿಲ್ಲ. ಹುಡುಕಿದರು, ಹುಡುಕಿದರು, ಇಲ್ಲ ಎಲ್ಲೂ.

ಹುಡುಕಾಟ ಮುಂದುವರೆಯಿತು. ಹೆಂಗಸರನ್ನು ಗಂಡಸರು ಹುಡುಕಿದರು. ಇಲ್ಲ , ಹೆಂಗಸರಿಲ್ಲ. ಗಂಡಸರು ಹೆಂಗಸರನ್ನು ಹುಡುಕಿದರು... ಅನವರತ ಈಗ. ಎಲ್ಲ ಕಡೆ. ಹುಡುಕಿದರು. ಇಲ್ಲ, ಅವರು ಸಿಗಲಿಲ್ಲ ಅವರಿಗೆ.

ಅವರು ಹುಡುಕುತ್ತಿರುವಾಗ ಎಲ್ಲೆಲ್ಲೂ, ಇದು ಯಾವುದನ್ನೂ ಕಂಡಿರದ ಅಪರಿಚಿತ ವ್ಯಕ್ತಿ ಎದುರಾಗಿ ಇವರು ಕಣ್ಣ ರೆಪ್ಪೆಗಳನ್ನು ಮುಚ್ಚಿ ತೆರೆಯುವುದರೊಳಗೆ ನೆರಳಾಗಿ ಗಂಡೆಂದೂ ಗುರುತಿಸಲಾರದ ಹೆಣ್ಣೆಂದೂ ಗುರುತಿಸಲಾರದ ನೆರಳಾಗಿ, ಆಕೃತಿಯಾಗಿ ನೀವು ಹುಡುಕುತ್ತಿರುವವರು ಎಲ್ಲಿದ್ದರೋ ಅಲ್ಲೇ ಇದ್ದಾರೆ ಎಂದಿತು. ಮತ್ತೆ ಮರಳಿದರು. ಇವರು ಒಡೆದು ಹಾಕಿದ್ದ ಕನ್ನಡಿ ಮನೆಗಳು ಮತ್ತೆ ಅಲ್ಲಿ. ಮತ್ತೆ ಈಗಲೂ ಮನೆಗಳ ಬದಲಿಗೆ ಕನ್ನಡಿಯ ಮನೆಗಳು. ಒಳ ಹೊಕ್ಕರು. ಮತ್ತೆ ಅದೇ ಗೊಂದಲ ಹೊರ ಬರಲಾರದೆ, ಬಾಗಿಲು ಯಾವುದು, ಹೇಗೆ ಎಲ್ಲಿಂದ ಒಳ ಹೊಕ್ಕೆವು ಎಂದು ತಮಗೆ ತಾವೇ ಪ್ರಶ್ನೆ. ಕನ್ನಡಿಯಲ್ಲಿ ಅವರ ಬಿಂಬಗಳಿಲ್ಲ, ಬದಲಿಗೆ ಹೆಂಗಸರಿದ್ದಾರೆ. ಕನ್ನಡಿಯಲ್ಲಿದ್ದಾರೆ, ಮುಟ್ಟಿದರೆ ಸಿಗುತ್ತಿಲ್ಲ. ನಿಜದಂತೆ ಕನ್ನಡಿಯೊಳಗಿದ್ದಾರೆ. ವಾಸ್ತವದ ಬೆರಳುಗಳ ತುದಿಯಲ್ಲಿದ್ದರೂ ಸಿಗುತ್ತಿಲ್ಲ. ಎದುರಿಗೇ ಇದ್ದಾರೆ, ಸಿಗುತ್ತಿಲ್ಲ.

ಎತ್ತನೋಡಿದರೆ ಅತ್ತಲೆಲ್ಲ ಅವರೇ ತುಂಬಿಕೊಂಡಿದ್ದಾರೆ. ಮತ್ತೆ ಒಡೆದರು ಕನ್ನಡಿಗಳ. ಈಗ.

ಪ್ರತಿಕ್ರಿಯಿಸಿ: feedback@sudha.co.in